ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 124-128
©*IIMRD*, Mysuru

IIMRD JOURNALS

www.iimrd.com

# ವೆಂಕಟಾಪುರ ಕೋಟೆ: ಒಂದು ಅಧ್ಯಯನ

ಪಾವನ ಜಿ [1]

**ಪೀಠಿಕೆ**

ಜಗತ್ತಿನ ಇತಿಹಾಸದಲ್ಲಿ ಮಾನವನು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲು ಬೆಟ್ಟ–ಗುಡ್ಡ, ಗುಹೆಗಳನ್ನು ಆಶ್ರಯಿಸಿಕೊಂಡನು. ಅಲೆಮಾರಿಯಾಗಿ ಬದುಕುತ್ತಿದ್ದ ಮಾನವ ಕೃಷಿಯಲ್ಲಿ ತೊಡಗಿಸಿಕೊಂಡು ಒಂದೆಡೆ ನೆಲೆ ನಿಂತನು. ನಾಗರಿಕತೆ ಬೆಳೆದಂತೆ ಚಿಕ್ಕ–ಚಿಕ್ಕ ಗುಡಿಸಲುಗಳಲ್ಲಿ ಆಶ್ರಯ ಪಡೆದು ಮುಂದೆ ಗ್ರಾಮಗಳಾಗಿ ರೂಪುಗೊಂಡವು. ಮುಂದೆ ವಿಸ್ತರಣೆಗೊಂಡ ಊರುಗಳು ಒಟ್ಟುಗೂಡಿ ರಾಜ್ಯಗಳಾದವು. ರಾಜ್ಯಗಳು ಸ್ಥಾಪನೆಯಾದ ನಂತರ ಆಳುವ ಅರಸರು ತಮ್ಮ ರಾಜ್ಯದ ರಾಜಧಾನಿಗಳಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಬಲವಾದ ಕೋಟೆಗಳನ್ನು ಕಟ್ಟಿದರು.

ಪ್ರಸ್ತುತ ಲೇಖನದಲ್ಲಿ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರುವ ವೆಂಕಟಾಪುರ ಕೋಟೆಯನ್ನು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ. ಈ ಅಧ್ಯಯನದ ಮೂಲಕ ವಿಜಯನಗರ ಸಾಮ್ರಾಜ್ಯದ ರಕ್ಷಣಾ ವಾಸ್ತು, ವ್ಯವಸ್ಥೆ, ಉದ್ದೇಶ, ಕಲೆ ಮತ್ತು ವೈಭವವನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.


ಪ್ರಸ್ತುತ ಅಧ್ಯಯನಕ್ಕೊಳಪಡಿಸಿರುವ ವೆಂಕಟಾಪುರ ಕೋಟೆಯು, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ವೆಂಕಟಪುರ ಎಂಬ ಗ್ರಾಮದಲ್ಲಿ ಕಂಡುಬರುತ್ತದೆ. ಈ ಗ್ರಾಮವು ತಾಲೂಕು ಕೇಂದ್ರದಿಂದ 16 ಕಿ.ಮೀ, ಜಿಲ್ಲಾ ಕೇಂದ್ರದಿಂದ 55 ಕಿ.ಮೀ ಮತ್ತು ರಾಜ್ಯದ ರಾಜದಾನಿ ಬೆಂಗಳೂರಿನಿಂದ 335 ಕಿ.ಮೀ ದೂರದಲ್ಲಿ ಕಂಡು ಬರುತ್ತದೆ. ಈ ಗ್ರಾಮವು 7 ಕಿ.ಮೀ ಅಂತರದಲ್ಲಿ ಇತಿಹಾಸ ಪ್ರಸಿದ್ಧ ಹಂಪಿ, 9 ಕಿ.ಮೀ ಅಂತರದಲ್ಲಿ ರಾಮಸಾಗರ, 12 ಕಿ.ಮೀ ಅಂತರದಲ್ಲಿ ಮಲಪನಗುಡಿ ಗ್ರಾಮಗಳನ್ನು ಒಳಗೊಂಡಿದೆ. 2011 ನೇ ಜನಗಣತಿ ಪ್ರಕಾರ ಗ್ರಾಮದಲ್ಲಿ 1,559 (ಶೇ.50.9) ಮಹಿಳೆ ಮತ್ತು 1,473 ಪುರುಷ (ಶೇ.48.1) ರನ್ನೊಳಗೊಂಡಂತೆ ಒಟ್ಟು 3061ರಷ್ಟು ಜನಸಂಖ್ಯೆ ಕಂಡು ಬರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.48.1ರಷ್ಟು ಅಕ್ಷರಸ್ಥರಿದ್ದು, ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಾಕ್ಷರತೆ ಅತ್ಯಂತ ಕಡಿಮೆ (ಶೇ.21.1) ಇರುವುದನ್ನು ಕಾಣಬಹುದಾಗಿದೆ.

---

[1] *ಸಂಶೋಧನಾ ವಿದ್ಯಾರ್ಥಿನಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.*

ವೆಂಕಟಾಪುರವು ಪ್ರಾಚೀನ ನವಶಿಲಾಯುಗದಿಂದಲೂ ಜನವಸತಿಯನ್ನು ಹೊಂದಿರುವ ಗ್ರಾಮವಾಗಿದೆ. ಈ ಗ್ರಾಮದಲ್ಲಿ ವಿಜಯನಗರ ಕಾಲದ ರಾಮಲಿಂಗ ದೇವಾಲಯವಿದ್ದು, ಈ ದೇವಾಲಯದ ರಸ್ತೆಯಿಂದ 1 ಕಿ.ಮೀ ದೂರದಲ್ಲೊಂದು ಬೆಟ್ಟವಿದ್ದು, ಈ ಬೆಟ್ಟದ ಬಂಡೆಯ ಮೇಲೆ ನವಶಿಲಾಯುಗದ ಕೆಂಪು ಬಣ್ಣದ ಗೀರು ಚಿತ್ರಗಳಿವೆ. (ಚಿತ್ರ 01)

ಚಿತ್ರ : 1




ಬೆಟ್ಟದ ಮುಂಭಾಗದಲ್ಲಿ ವಿಶಾಲ ಭೂ ಪ್ರದೇಶವು ಅಂದಿನ ನವಶಿಲಾಯುಗದ ಕಾಲದ ಜನರು ವಾಸಿಸುವ ನೆಲೆಯಾಗಿತ್ತೆಂದು ಅಲ್ಲಿ ಉಲ್ಲೇಖಿಸಲಾಗಿದೆ. ಈ ಸ್ಥಳದಿಂದ ಅರ್ಧ ಕಿ.ಮೀ ದೂರದಲ್ಲಿ ಬೂದಿ ದಿಬ್ಬವಿದೆ. ಪ್ರಸ್ತುತ ಇದು ಗದ್ದೆಯಲ್ಲಿರುವುದರಿಂದ ಗಿಡಗಳು ಬೆಳೆದುಕೊಂಡು ಮತ್ತು ಕೃಷಿ ಚಟುವಟಿಕೆಯಿಂದ ಈ ಬೂದಿ ದಿಬ್ಬವು ಸಾಕಷ್ಟು ನಾಶವಾಗಿದೆ. ಇಂದು ಬೂದಿ ದಿಬ್ಬವನ್ನು ವಾಲಿ ದಿಬ್ಬವೆಂದು ಕರೆಯುವರು. ಪುರಾಣಗಳ ಪ್ರಕಾರ ರಾಮಾಯಣದ ವಾಲಿ ಮತ್ತು ಸುಗ್ರೀವ ಸಹೋದರರ ಕಾದಾಟದಲ್ಲಿ ವಾಲಿ ಸಾಯುತ್ತಾನೆ. ವಾಲಿಯ ದೇಹವನ್ನು ಸುಟ್ಟ ನಂತರ ಉಂಟಾದ ಬೂದಿಯು ದಿಬ್ಬವಾಯಿತೆಂದು, ಇದನ್ನು ವಾಲಿಕಷ್ಟೇ ಎಂದು ಕರೆಯುತ್ತಾರೆ.

ಚಿತ್ರ : 2



ಈ ಗ್ರಾಮದಲ್ಲಿ ವಿಜಯನಗರ ಕಾಲದ ಕೋಟೆ ಗೋಡೆಯು ಉತ್ತರ ದಕ್ಷಿಣದವರೆಗೆ 300 ಮೀ ಹರಡಿಕೊಂಡಿದೆ. ಪೂರ್ವ ಪಶ್ಚಿಮವಾಗಿ 300 ಮೀ ಹರಡಿದೆ. ಈ ಕೋಟೆಯ ಒಳಭಾಗದಲ್ಲಿ ವಸತಿ ನೆಲೆಯ ಅವಶೇಷಗಳು ಇವೆ. ಇವುಗಳ ನಡುವೆ ವೆಂಕಟಾಪುರ ಕೋಟೆ ಗೋಡೆಯ ಅವಶೇಷಗಳು ಕಂಡು ಬರುತ್ತವೆ. ಈ ಕೋಟೆಯು ಶ್ರೀ ಗುಡ್ಡದ ತಿಮ್ಮಪ್ಪ ದೇವಾಲಯಕ್ಕೆ ಹೋಗುವ ಮಾರ್ಗದಿಂದ

ಒಂದು ಕಿ.ಮೀ. ಅಂತರದಲ್ಲಿ ಕಂಡುಬರುತ್ತದೆ. ಈ ಕೋಟೆ ಗೋಡೆಯ ಸುತ್ತ ವಿಶಾಲವಾದ ಭೂ ಪ್ರದೇಶವಿದ್ದು, ಬೆಟ್ಟ ಗುಡ್ಡಗಳಿಂದ ಹರಡಿಕೊಂಡಿದೆ. ವೆಂಕಟಾಪುರ ಕೋಟೆಯ ವಿಶೇಷವೆಂದರೆ ಈ ಗ್ರಾಮದ ಮುಂಭಾಗದ ಬೆಟ್ಟದವರೆಗೂ ಸುತ್ತುವರೆದಿರುವುದನ್ನು ಕಾಣಬಹುದಾಗಿದೆ. (ಚಿತ್ರ 02)

**ಕೋಟೆ ಗೋಡೆಯ ಲಕ್ಷಣಗಳು:** ಈ ಕೋಟೆಯು ಆಯಕಟ್ಟಿನ ಹಾಗೂ ಸಂಪೂರ್ಣ ಗಿರಿದುರ್ಗ ಹಾಗೂ ವನದುರ್ಗ ಕೋಟೆಯಾಗಿದೆ. ಕೋಟೆಯ ಬಲಭಾಗದಿಂದ ಹಿಡಿದು ಉತ್ತರ ದಿಕ್ಕಿನವರೆಗೂ ಕೋಟೆ ಗೋಡೆಯ ಅವಶೇಷಗಳು ಅಲ್ಲಲ್ಲಿ ಕಂಡು ಬರುತ್ತದೆ. ಈ ಕೋಟೆಗೋಡೆಯನ್ನು ದೊಡ್ಡ ದೊಡ್ಡ ಬಂಡೆ ಬಳಸಿ ಕಟ್ಟಿದ್ದು, ಕೋಟೆ ಗೋಡೆಯನ್ನು ಆಯತಾಕಾರವಾಗಿ ಗ್ರಾನೈಟ್ ಕಲ್ಲುಗಳನ್ನು ಉಪಯೋಗಿಸಿಕೊಂಡು ನಿರ್ಮಿಸಿದ್ದಾರೆ. ಅಲ್ಲಲ್ಲಿ ಸಮಾಂತರ ಕಲ್ಲುಗಳನ್ನು ಉಪಯೋಗಿಸಿಕೊಂಡು ಕೋಟೆ ಕಟ್ಟಿದ್ದಾರೆ ಹಾಗೂ ಇಂದು ಒಂದೇ ಸಾಲಿನಲ್ಲಿ ಈ ಕೋಟೆ ಗೋಡೆ ಕಂಡು ಬಂದಿದೆ. (ಚಿತ್ರ.03) ಈ ಕೋಟೆ ಗೋಡೆಯ ಸುತ್ತಿನ ಮಧ್ಯದಲ್ಲಿ 8 ಸಾಲಿನಲ್ಲಿ ಕೋಟೆಗೋಡೆಗೆ ಹೊಂದಿಕೊಂಡಂತೆಯೇ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಪ್ರಸ್ತುತ ಬರೀ ಮೆಟ್ಟಿಲುಗಳನ್ನು ಕಾಣುತ್ತೇವೆ. (ಚಿತ್ರ.04). ಈ ಕೋಟೆಗೋಡೆಯು 28 ಮೀ ಉದ್ದ ಮತ್ತು 1.45 ಮೀ ಅಗಲವಿದೆ. ಪ್ರಸ್ತುತ ಈ ಕೋಟೆಯು ಕನಿಷ್ಠ ಸ್ಥಿತಿಯಲ್ಲಿದೆ. ಇಲ್ಲಿ ಜನವಸತಿ ಕೇಂದ್ರವಾಗಿತ್ತು ಎಂದು ಹೇಳುತ್ತಾರೆ. ಆದರೆ ಇಂದು ಜನವಸತಿಯ ನೆಲೆಯ ಕುರುಹುಗಳು ಕಂಡು ಬಂದಿಲ್ಲ. ಈ ಕೋಟೆಯನ್ನು ಬೆಟ್ಟ ಗುಡ್ಡದ ಮಧ್ಯದಲ್ಲಿ ಖಾಲಿ ಇರುವಂತಹ ಸ್ಥಳಗಳಲ್ಲಿ ಬೆಟ್ಟಕ್ಕೆ ಹೊಂದಿಕೊಂಡಂತೆ ಕೋಟೆಯನ್ನು ನಿರ್ಮಿಸಲಾಗಿದೆ. ಇದರ ಮತ್ತೊಂದು ಭಾಗದಲ್ಲಿ ಇಳಿಪೊರೆಯನ್ನು ನಿರ್ಮಿಸಿದ್ದಾರೆ. ಇದು ಅಂದಿನ ರಕ್ಷಣಾ ವ್ಯವಸ್ಥೆಗೆ ಸಾಕ್ಷಿಯಾಗಿದೆ.

ಚಿತ್ರ : 3




ಚಿತ್ರ : 4



**ಕೋಟೆಯಲ್ಲಿ ಕಂಡು ಬರುವ ಸ್ಮಾರಕಗಳು**

ಕೋಟೆಯಲ್ಲಿ ವಿಜಯನಗರ ಕಾಲದ ರಾಮಲಿಂಗ ದೇವಾಲಯ (ಚಿತ್ರ. 05), ಗುಡ್ಡದ ತಿಮ್ಮಪ್ಪ ದೇವಾಲಯ (ಚಿತ್ರ. 06) ಓಂ ಶ್ರೀ ಪಾಂಡುರಂಗ ರುಕ್ಮಿಣಿ ದೇವಿ ದೇವಾಲಯ (ಚಿತ್ರ. 07) ಕಂಡು ಬರುತ್ತವೆ. ಅದೇ ರೀತಿಯಾಗಿ ಕೋಟೆ ಗೋಡೆಯ ಸುತ್ತಿನ ಒಳ ಭಾಗದಲ್ಲಿ ಪುಷ್ಕರಣಿ ಸಹ ನಿರ್ಮಿಸಿದ್ದಾರೆ. (ಚಿತ್ರ 08)


ಚಿತ್ರ : 5


ಚಿತ್ರ : 6

ರಾಮಲಿಂಗ ದೇವಾಲಯ ಅದರ ಗರ್ಭಗೃಹದಲ್ಲಿ ಹೊಸಲಿಂಗವನ್ನು ಮತ್ತು ಅಂತರಾಳದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮುಖ ಮಂಟಪದ ಪಕ್ಕದಲ್ಲಿ ವಿಜಯನಗರ ಕಾಲದ ಶಿವಲಿಂಗವು ಮತ್ತೊಂದು ಗರ್ಭ ಗೃಹದಲ್ಲಿ ದೇವಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ.


ಚಿತ್ರ : 7


ಚಿತ್ರ : 8

ಶಿವಲಿಂಗವಿರುವ ಗರ್ಭಗೃಹದಲ್ಲಿ ಮುಖ ಮಂಟಪದ ಮುಂಭಾಗದಲ್ಲಿ ದೀಪಸ್ಥಂಭವಿದೆ. ಈ ದೇವಾಲಯ ಪ್ರಸ್ತುತ ಜೀರ್ಣೋದ್ಧಾರಗೊಂಡಿದೆ. ಇಲ್ಲಿ ಇರುವಂತಹ ದೀಪಸ್ತಂಭದ ಮುಂಭಾಗದಲ್ಲಿರುವ ನಂದಿ ಶಿಲ್ಪ ಮತ್ತು ಶಿವಲಿಂಗಗಳಲ್ಲೆಲ್ಲಾ ವಿಜಯನಗರ ಕಾಲಕ್ಕೆ ಸೇರಿದವುಗಳಾಗಿವೆ. ಆಧುನಿಕ ಆಂಜನೇಯ ದೇವಾಲಯದಲ್ಲಿನ ಬಾಗಿಲವಾಡದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಒಟ್ಟಾರೆಯಾಗಿ ವೆಂಕಟಾಪುರ ಕೋಟೆಯನ್ನು ಸೂಕ್ಷ್ಮಾವಲೋಕನದೊಂದಿಗೆ ಸಂಶೋಧನೆಗೊಳಪಡಿಸಿದರೆ ಮಹತ್ವದ ಐತಿಹಾಸಿಕ ಅಂಶಗಳು ಬೆಳಕಿಗೆ ಬರಬಹುದು.

**ಪರಾಮರ್ಶನ/ಆಕರ ಗ್ರಂಥಗಳು**


- ಅರುಣಿ ಎಸ್. ಕೆ. (2019). ಕರ್ನಾಟಕದ ಇತಿಹಾಸ ಅನ್ವೇಷಣೆಗಳು. ಇತಿಹಾಸ ದರ್ಪಣ ಪ್ರಕಾಶನ, ಬೆಂಗಳೂರು. ಪು.1–7

- ಬೆಟಗೇರಿ ಕೃಷ್ಣಶರ್ಮಾ. (1983). ಕರ್ನಾಟಕ ಜನಜೀವನ. ವಿಶ್ವ ಕನ್ನಡ ಸಮ್ಮೇಳನ, ಬೆಂಗಳೂರು. ಪು.11
- ಲಾಂಗ್ವರ್ಸ್ಟ್.ಎ ಎಲ್. (2020). ಹಂಪೆಯ ಅವಶೇಷಗಳು. ವಾಸನ್ಸ್ ಪಬ್ಲಿಕೇಷನ್ಸ್, ಬೆಂಗಳೂರು. ಪು.ಸಂ.62
- ಮಂಜುನಾಥ ಎಸ್.ಪಾಟೀಲ. (2008). ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ. ಪ್ರಣಮ್ಯ ಎಜ್ಯುಕೇಶನ್ ಫೌಂಡೇಶನ್, ಬೆಳಗಾವಿ. ಪು.ಸಂ.95–96
- ತಿಪ್ಪೇಸ್ವಾಮಿ. ಎಸ್. ವಿಜಯನಗರ ಕಾಲದ ರಕ್ಷಣಾ ವಾಸ್ತು ಶೈಲ–ವಿಜಯನಗರ ಅಧ್ಯಯನ. ಸಂ.18, ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು, ಪು.116–120